# 2025ಕ್ಕೆ ಕಾಂತಾರ 2?

ಬಹುನಿರೀಕ್ಷಿತ 'ಕಾಂತಾರ 2' ಸಿನಿಮಾ ಚಿತ್ರೀಕರಣ ಬಹುಪಾಲು ಪೂರ್ಣಗೊಂಡಿದ್ದು, 2025ರಲ್ಲಿ ಬಿಡುಗಡೆಯಾಗುವ ಸೂಚನೆ ದೊರಕಿದೆ.



'ಕಾಂತಾರ' ಸಿನಿಮಾ ಜಾಗತಿಕ ಮಟ್ಟದಲ್ಲಿ ಸುದ್ದಿಯಾಗಿತ್ತು. ಆ ಯಶಸ್ಸಿನ ಬೆನ್ನಲ್ಲೇ, 'ಕಾಂತಾರ 2' ಸಿನಿಮಾ ಕೂಡ ಘೋಷಣೆಯಾಗಿತ್ತು. ದೊಡ್ಡ ಬಜೆಟ್‌ನಲ್ಲಿ ಈ ಸಿನಿಮಾ ಮೂಡಿಬರಲಿರುವುದಾಗಿ ತಂಡ ಹೇಳಿಕೊಂಡಿತ್ತು. ರಿಯಲ್ ಲೊಕೇಷನ್‌ಗಳಲ್ಲಿ ಹಾಗೂ ಸ್ಟುಡಿಯೊ ಸೆಟ್‌ನಲ್ಲೂ ಚಿತ್ರೀಕರಣ ನಡೆದಿದ್ದು, ಇನ್ನೇನು ಶೂಟಿಂಗ್ ಪೂರ್ಣಗೊಳ್ಳುವ ಹಂತದಲ್ಲಿರುವುದಾಗಿ ತಿಳಿದುಬಂದಿದೆ.

ಹೊರಾಂಗಣ ಚಿತ್ರೀಕರಣವನ್ನು ರಿಷಭ್ ಹಾಗೂ ತಂಡ ಮುಗಿಸಿದ್ದು, ಒಳಾಂಗಣ ಶೂಟಿಂಗ್ ಕೂಡ ಕೆಲವೇ ದಿನಗಳಲ್ಲಿ ಮುಗಿಯಲಿದೆ. ಸಿನಿಮಾ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಕೂಡ ಈಗಾಗಲೇ ಆರಂಭವಾಗಿವೆ ಎಂದು ಮೂಲಗಳು ತಿಳಿಸಿವೆ.

ಸಿನಿಮಾದಲ್ಲಿ ವಿಷುವಲ್ ಎಫೆಕ್ಟ್‌ಗೆ ಆದ್ಯತೆ ನೀಡಲಾಗಿದೆ. 'ಕಾಂತಾರ'ಗಿಂತ ಎಲ್ಲ ಅಂಶಗಳಲ್ಲೂ ಹತ್ತು ಪಟ್ಟು ಹೆಚ್ಚು ಉತ್ತಮ ರೀತಿ ಸಿನಿಮಾ ಮೂಡಿಬರಲಿದೆ. 2025ರ ಬೇಸಿಗೆಯಲ್ಲಿ ಸಿನಿಮಾ ಬಿಡುಗಡೆ ಮಾಡುವ ಆಲೋಚನೆಯಿದ್ದು, ಅಕ್ಟೋಬರ್ ತಿಂಗಳಿನಿಂದಲೇ ಪ್ರೊಮೋಷನ್ ಕೆಲಸಗಳು ಆರಂಭಗೊಳ್ಳಲಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

# ವಿಶೇಷ ಪಾತ್ರದಲ್ಲಿ ಲೂಸ್ ಮಾದ

ನಿರ್ದೇಶಕ ಇಂದ್ರಜಿತ್ ಲಂಕೇಶ್ ತಮ್ಮ ಪುತ್ರ ಸಮರ್ಜಿತ್ ಅವರನ್ನು 'ಗೌರಿ' ಸಿನಿಮಾ ಮೂಲಕ ಕನ್ನಡ ಸಿನಿಮಾರಂಗಕ್ಕೆ ಪರಿಚಯಿಸುತ್ತಿದ್ದು, ನಟ ಯೋಗೇಶ್ ಕೂಡ ಸಿನಿಮಾದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿರುವುದಾಗಿ ತಿಳಿದುಬಂದಿದೆ.



'ಗೌರಿ' ಮೂಲಕ ಸಮರ್ಜಿತ್ ನಾಯಕನಾಗಿ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. ನಾಯಕಿಯಾಗಿ ಸಾನ್ಯಾ ಅಯ್ಯರ್ ನಟಿಸಿದ್ದು, ಸ್ವಾತಂತ್ರ್ಯ ದಿನದಂದು ಸಿನಿಮಾ ಬಿಡುಗಡೆ ಆಗುತ್ತಿದೆ. ಈಗಾಗಲೇ ಸಿನಿಮಾದ 'ಟೈಮ್ ಬರುತ್ತೆ', 'ಧೂಳ್ ಎಬ್ಬಾವ' ಮತ್ತು 'ಮುದ್ದಾದ' ಹಾಡುಗಳು ಜನಪ್ರಿಯವಾಗಿದ್ದು, ಸಿನಿಮಾ ಬಿಡುಗಡೆಯೂ ಸನಿಹದಲ್ಲಿದೆ.

ಲೂಸ್ ಮಾದ ಯೋಗಿ ಕೂಡ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದಾಗಿ ತಿಳಿದುಬಂದಿದೆ. 'ಸಿದ್ಲಿಂಗು 2', 'ರೋಜಿ', 'ಪರಿಮಳ ಲಾಡ್ಜ್', 'ಆಡಿದ್ದೆ ಆಟ' ಹಾಗೂ ತಮಿಳು ಸಿನಿಮಾದಲ್ಲಿ ಯೋಗಿ ಬ್ಯುಸಿಯಾಗಿದ್ದಾರೆ.

# ಪ್ರತಿ ಪಾತ್ರವೂ ಅಡಿಗಲ್ಲು; ಅಶ್ವಿನಿ



ದುನಿಯಾ ವಿಜಯ್ ನಿರ್ದೇಶಿಸಿ, ನಟಿಸಿರುವ 'ಭೀಮ' ಸಿನಿಮಾ ಆಗಸ್ಟ್ 9ರಂದು ಬಿಡುಗಡೆಯಾಗಲಿದ್ದು, ನಟಿ ಅಶ್ವಿನಿ ಅಂಬರೀಶ್ ತಮ್ಮ ಪಾತ್ರದ ಕುರಿತು ನಿರೀಕ್ಷೆಗಳನ್ನು ವ್ಯಕ್ತಪಡಿಸಿದ್ದಾರೆ. 'ಯಶಸ್ಸಿನ ಸೂತ್ರವನ್ನು ಬೆನ್ನಟ್ಟುವುದಕ್ಕಿಂತ ಪ್ರತಿ ಪಾತ್ರವನ್ನೂ ಒಂದು ಅಡಿಗಲ್ಲನ್ನಾಗಿ ಮಾಡಿಕೊಳ್ಳುತ್ತೇನೆ' ಎಂದಿದ್ದಾರೆ.

ರಂಗಭೂಮಿಯ ಹಿನ್ನೆಲೆಯಿಂದ ಬಂದಿರುವ ನಟಿ ಅಶ್ವಿನಿ, 'ಭೀಮ' ಸಿನಿಮಾ ಮೂಲಕ ಸ್ಯಾಂಡಲ್‌ವುಡ್ ಪ್ರವೇಶಿಸಿದ್ದಾರೆ. ತಮ್ಮ ಮೊದಲ ಸಿನಿಮಾ ಕುರಿತು ಬಹಳಷ್ಟು ಭರವಸೆಯನ್ನೂ ಹೊಂದಿದ್ದಾರೆ. ತಮ್ಮ ಚೊಚ್ಚಲ ಸಿನಿಮಾ ಅನುಭವವನ್ನು ತೆರೆದಿಟ್ಟಿದ್ದಾರೆ.

'ನನ್ನಂಥ ಹೊಸಬರಿಗೆ ಇಂಥದ್ದೊಂದು ಸಿನಿಮಾ ಹಾಗೂ ನಿರ್ದೇಶಕರ ಅಗತ್ಯವಿರುತ್ತದೆ. ವಿಜಯ್ ಅವರು ಸೂಕ್ತ ಮಾರ್ಗದರ್ಶನ ನೀಡಿದರು. ನಟರೊಂದಿಗೆ ಮೊದಲೇ ಚರ್ಚೆ ಮಾಡಿ ಅಗತ್ಯ ಮಾರ್ಪಾಡುಗಳನ್ನು ಮಾಡುತ್ತಾ ಇನ್ನಷ್ಟು ಪಕ್ವವಾಗುವಂತೆ ಮಾಡುತ್ತಿದ್ದರು. ತಮ್ಮ ನಿರೀಕ್ಷೆಗಳನ್ನು ಸಹನಟರು ಅರ್ಥ ಮಾಡಿಕೊಳ್ಳುವಂಥ ವಾತಾವರಣವನ್ನು ಅವರು ಸೃಷ್ಟಿಸುತ್ತಾರೆ. ಹೀಗಾಗಿಯೇ ಅವರ ನಿರೀಕ್ಷೆಗೆ ತಕ್ಕಂತೆ ನನ್ನ ಹಾಗೂ ತಂಡದ ಇತರರು ಪರ್ಫಾರ್ಮೆನ್ಸ್ ನೀಡಲು ಸಾಧ್ಯವಾಯಿತು. ಈ ಸಿನಿಮಾ ಏನು ಸಂದೇಶ ನೀಡಲು ಹೊರಟಿದೆ ಎಂಬುದನ್ನು ಅರ್ಥ ಮಾಡಿಸಲು ಹಲವು ವಿಡಿಯೊಗಳನ್ನು ತೋರಿಸಿದರು' ಎಂದು ವಿವರಿಸಿದ್ದಾರೆ ಅಶ್ವಿನಿ.

'ಭೀಮ' ಸಿನಿಮಾ ಕುರಿತು ಮಾತನಾಡಿ, 'ಇದು ಬರೀ ಭೂಗತ ಲೋಕದ ಕಥೆಯಲ್ಲ, ಸಾಮಾಜಿಕ ಸಮಕಾಲೀನ ವಿಷಯವನ್ನೊಳಗೊಂಡ ಕಮರ್ಷಿಯಲ್ ಎಂಟರ್‌ಟೇನ್ಮೆಂಟ್ ಪ್ಯಾಕೇಜ್' ಎಂದು ಹೇಳಿಕೊಂಡಿದ್ದಾರೆ. ಜೊತೆಗೆ, ತಮ್ಮ ಪಾತ್ರಕ್ಕೆ ಜನ ಹೇಗೆ ಪ್ರತಿಕ್ರಿಯಿಸಬಹುದು ಎಂಬ ಬಗ್ಗೆಯೂ ಕುತೂಹಲ ಹೊಂದಿದ್ದಾರೆ.

ತಮ್ಮ ಸಿನಿಮಾ ಭವಿಷ್ಯದ ಬಗ್ಗೆ ಮಾತನಾಡುತ್ತಾ, 'ನಾನು ಸಿನಿಮಾರಂಗ ಪ್ರವೇಶಿಸಿದಾಗ ಕೆಲವೊಂದು ಪಾತ್ರಗಳನ್ನು ಮಾಡಬಾರದೆಂದುಕೊಂಡಿದ್ದೆ. ಆದರೆ ಒಬ್ಬ ನಟಿಯಾಗಿ, ಸ್ಟೀರಿಯೊಟೈಪ್ ಮೀರುವುದು ನನ್ನ ಕರ್ತವ್ಯ. ಯಶಸ್ಸಿನ ಸೂತ್ರ ಹಿಡಿದು ಬೆನ್ನಟ್ಟುವುದಕ್ಕಿಂತ ಪ್ರತಿ ಪಾತ್ರವನ್ನೂ ಅಡಿಗಲ್ಲು ಮಾಡಿಕೊಳ್ಳುತ್ತೇನೆ. ಪ್ರತಿ ಸವಾಲಿನ ಬಗ್ಗೆಯೂ ಆಶಾವಾದಿಯಾಗಿರುತ್ತೇನೆ' ಎಂದಿದ್ದಾರೆ.